## ಈಗ iXiGO.com ನೊಂದಿಗೆ ನಿಮ್ಮ ಬಸ್ ಪ್ರಯಾಣಗಳನ್ನು ಯೋಜಿಸಿ

ಬಸ್ ಪ್ರಯಾಣಗಳ ಬಗ್ಗೆ ಅತ್ಯುತ್ತಮ ವಹಿವಾಟನ್ನು ಒದಗಿಸಲಿದೆ ಪ್ರಮುಖ ಪ್ರಯಾಣ ಸರ್ಚ್ ಇಂಜಿನ್

**ನವದೆಹಲಿ, ಸೆಪ್ಟೆಂಬರ್ 5, 2008:** ಭಾರತದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆನ್ ಲೈನ್ ಪ್ರಯಾಣ ಸರ್ಚ್ ಇಂಜಿನ್ ಆದ iXiGO (www.ixigo.com), ತನ್ನ ಬಸ್ ಹುಡುಕಾಟ ಸಾಧನ ಬಿಡುಗಡೆ ಮಾಡಿರುವುದಾಗಿ ಇಂದಿಲ್ಲಿ ಪ್ರಕಟಿಸಿ, ವಿವಿಧ ಬಸ್ ಆಪರೇಟರ್‌ಗಳ ಬಸ್ ಟಿಕೆಟ್ ಮುಂಗಡ ಕಾಯ್ದಿರಿಸುವುದನ್ನು ಹಾಗು ಭಾರತದಲ್ಲಿರುವ ಬಸ್ ಬುಕಿಂಗ್ ಸ್ಥಳಗಳ ಹುಡುಕಾಟವನ್ನು ಸುಲಭಗೊಳಿಸಿದೆ.

www.ixigo.com/buses ನಲ್ಲಿ ಲಭ್ಯವಿರುವ iXiGO ಅವರ ಬಸ್ ಹುಡುಕಾಟ ಸಾಧನವು, 500 ಕ್ಕೂ ಹೆಚ್ಚಿನ ನಗರ/ಪಟ್ಟಣಗಳಲ್ಲಿ 2300 ಕ್ಕೂ ಹೆಚ್ಚಿನ ಮಾರ್ಗಗಳಲ್ಲಿ ಹರಡಿಕೊಂಡಿರುವ ನೂರಾರು ಖಾಸಗಿ ಬಸ್ ಆಪರೇಟರ್‌ಗಳನ್ನು ಸಂಯುಕ್ತಗೊಳಿಸುತ್ತದೆ. ಎಸಿ ರಹಿತ ಬಸ್‌ಗಳು, ಐಷಾರಾಮಿ ಸ್ಲೀಪರ್ ಬಸ್‌ಗಳು ಹಾಗು ಹವಾನಿಯಂತ್ರಿತ ವೋಲ್ವೋಗಳ ವಿವಿಧ ಶ್ರೇಣಿಯ ಬಸ್‌ಗಳ ನಡುವೆ ಬಸ್ ಪ್ರಯಾಣ ಕುರಿತಂತೆ ಹೋಲಿಸಿನೋಡಲು ಅವಕಾಶ ಕಲ್ಪಿಸುವ iXiGO, ಬಸ್ ವೇಳೆಗಳು, ಸೌಲಭ್ಯಗಳು ಹಾಗು ಬೆಲೆ ಮುಂತಾದ ವಿವಿಧ ಮಾನದಂಡಗಳಡಿಯಲ್ಲಿ ಹುಡುಕಾಟಕ್ಕೆ ಅನುವು ಮಾಡಿಕೊಡುತ್ತದೆ. iXiGOನ ಮೆಟಾ–ಸರ್ಚ್ ಇಂಜಿನ್ ಬಳಸಿ ಒಮ್ಮೆ ಬಳಕೆದಾರರು ತಮಗೆ ಸೂಕ್ತಕಂಡ ಬಸ್ ಆಯ್ಕೆ ಮಾಡಿದ ನಂತರ, ಅವರನ್ನು ಬಸ್ ಬುಕಿಂಗ್ ಸ್ಥಳದ ಚೆಕ್ ಔಟ್ ಪುಟಕ್ಕೆ ನಿರ್ದೇಶಿಸಲಾಗುತ್ತದೆ. ಅಲ್ಲಿ ಅವರು ತಮ್ಮ ವಹಿವಾಟನ್ನು ಪೂರ್ಣಗೊಳಿಸಬಹುದು.

ಭಾರತದ ಪ್ರಮುಖ ಆನ್ ಲೈನ್ ಬಸ್ ಬುಕಿಂಗ್ ಸೈಟ್‌ಗಳಾದ ಟಿಕೆಟ್‌ವಾಲ ಹಾಗು ರೆಡ್‌ಬಸ್ ಜೊತೆಗೆ ಪಾಲುದಾರಿಕೆ ಹೊಂದಿರುವ iXiGO, ಆನ್ ಲೈನ್ ಮೂಲಕ ಬಸ್ ಮುಂಗಡ ಕಾಯ್ದಿರಿಸುವಿಕೆಯನ್ನು ಅನುವು ಮಾಡಿಕೊಡುತ್ತದೆ. ಈ ಸಹಯೋಗದ ಬಗ್ಗೆ ಮಾತನಾಡಿದ ರೆಡ್‌ಬಸ್‌ನ ಸಿಇಓ ಫಣೀಂದ್ರ ಸಾಮ, "ಭಾರತದ ಪ್ರಮುಖ ಪ್ರಯಾಣ ಹುಡುಕಾಟ ಇಂಜಿನ್ ಸಂಸ್ಥೆಯೊಂದಿಗೆ ಸಹಯೋಗ ಹೊಂದುತ್ತಿರುವುದು ನಮಗೆ ಹರ್ಷ ತಂದಿದೆ. ಅವರ ಮೆಟಾ–ಸರ್ಚ್ ತಂತ್ರಜ್ಞಾನವು ನಮ್ಮ ಬಸ್ ಟಿಕೆಟಿಂಗ್ ಸಾಮರ್ಥ್ಯಕ್ಕೆ ಮತ್ತಷ್ಟು ಮೌಲ್ಯ ಒದಗಿಸುತ್ತದೆ" ಎಂದರು. ಟಿಕೆಟ್‌ವಾಲಾದ ಸಿಇಓ ಹರನಾಥ್ ಲೋಕನಾದಮ್ ಮಾತನಾಡಿ, "iXiGOನ ಬಹು ಜನಪ್ರಿಯ ಉತ್ಪನ್ನ ಹಾಗು ಅವರ ತಂಡದ ಬಗ್ಗೆ ನಮಗೆ ಅಪಾರ ವಿಶ್ವಾಸವಿದೆ. ನಾವು ಒಟ್ಟಾಗಿ, ಭಾರತದಲ್ಲಿ ತಮ್ಮ ಪ್ರಯಾಣ ಸಂಬಂಧಿತ ಬಸ್‌ಗಳ ಹುಡುಕಾಟ ನಡೆಸುವ ಪ್ರಯಾಣಿಕರಿಗೆ ಹೆಚ್ಚಿನ ಮೌಲ್ಯವರ್ಧಿತ ಸೇವೆ ಒದಗಿಸಲು ಸಾಧ್ಯವಾಗುತ್ತದೆ" ಎಂದರು.

ಈ ಸೇವೆಯ ಆರಂಭವನ್ನು ಪ್ರಕಟಿಸುತ್ತ, iXiGOನ ಸಂಸ್ಥಾಪಕ ಹಾಗು ಸಿಇಓ ಅಲೋಕ್ ಬಾಜ್‌ಪೈ, "ಆನ್ ಲೈನ್ ಬಸ್ ಟಿಕೆಟಿಂಗ್‌ಗೆ ಅಪಾರ ಬೇಡಿಕೆಯಿದೆ. ಹಾಗಾಗಿ ನಾವು ನಮ್ಮ ಪಾಲುದಾರರೊಂದಿಗೆ ಸೇರಿ ಬಸ್ ಆಪರೇಟರ್‌ಗಳ ವ್ಯಾಪಕ ಜಾಲವನ್ನು ಹುಡುಕುವಲ್ಲಿ ಬಳಕೆದಾರರಿಗೆ ನೆರವಾಗುತ್ತೇವೆ ಮತ್ತು ಕಾಲಕ್ರಮೇಣ, ನಮ್ಮ ಗ್ರಾಹಕರಿಗೆ ವ್ಯಾಪಕ ಹಾಗು ಉಪಯುಕ್ತ ಬಸ್ ಟಿಕೆಟ್ ಹುಡುಕಾಟ ಇಂಜಿನ್ ಒದಗಿಸುತ್ತೇವೆ" ಎಂದರು.

iXiGOನ ನವೀನ ಆನ್ ಲೈನ್ ಪ್ರಯಾಣ ಸಂಬಂಧ ಹುಡುಕಾಟವು, ವಿವಿಧ ಟ್ರಾವಲ್ ವೆಬ್‌ಸೈಟ್‌ಗಳ ಮಾಹಿತಿಯನ್ನು ಪ್ರಯಾಣಿಕರಿಗೆ ಸಮಯ ಹಾಗು ಹಣದ ಉಳಿತಾಯ ಮಾಡಿಕೊಡುವ ಮೂಲಕ ಕ್ರೋಢೀಕರಿಸಿ, ಹುಡುಕಾಟವನ್ನು ಹೆಚ್ಚು ಪರಿಣಾಮಕಾರಿಯಾಗಿಸುತ್ತದೆ ಮತ್ತು ವ್ಯಾಪಕತೆಯನ್ನೂ ಒದಗಿಸುತ್ತದೆ. ತನ್ನ ಪಾಲುದಾರರಿಗೆ, iXiGOನ ವ್ಯಾಪಾರ ಮಾದರಿಯು ಕೇಂದ್ರೀಕೃತ ಪ್ರಯಾಣಿಕರಿಂದ ನಿಖರ ಸುಳಿವುಗಳನ್ನು ಒದಗಿಸುತ್ತದೆ. ಇದಕ್ಕೂ ಮುನ್ನ iXiGO, ಭಾರತದ ಅತ್ಯಂತ ದೊಡ್ಡ ಹೊಟೆಲ್ ಹುಡುಕಾಟ ಸರ್ಚ್ ಇಂಜಿನ್

ಆದ “Hotels 2.0”,ಬಿಡುಗಡೆ ಮಾಡಿತ್ತು. ಇದರಲ್ಲಿ, ದೇಶದ 400 ಕ್ಕೂ ಹೆಚ್ಚಿನ ನಗರಗಳಲ್ಲಿನ 6000 ಕ್ಕೂ ಹೆಚ್ಚಿನ ಹೊಟೆಲ್‌ಗಳ ಮಾಹಿತಿ ಲಭ್ಯವಿದೆ. ಇದಲ್ಲದೆ, ನೇರ ಬುಕಿಂಗ್ ಸ್ಥಳೀಯ ವಿಮಾನಪ್ರಯಾಣದರ ಸರ್ಚ್ ಇಂಜಿನ್‌ನನ್ನೂ ಸಹ ಬಿಡುಗಡೆ ಮಾಡಿತ್ತು. ತಿಂಗಳಿನಿಂದ ತಿಂಗಳಿಗೆ 20% ಬೆಳವಣಿಗೆ ಕಂಡಿರುವ ಈ ವೆಬ್ ಸೈಟ್, ಸಿಂಗಾಪೂರ್‌ನ BAF Spectrum ನಿಂದ ಆರಂಭಿಕ ಬಂಡವಾಳಹೂಡಿಕೆ ಸ್ವೀಕರಿಸಿದೆ.

**iXiGO.com ಕುರಿತು:**

ಗುರಗಾಂವ್‌ನಲ್ಲಿ ಸ್ಥಾಪಿತವಾಗಿರುವ ಭಾರತ ಪ್ರಮುಖ ಆನ್ ಲೈನ್ ಪ್ರಯಾಣ ಹುಡುಕಾಟ ಇಂಜಿನ್ ಆಗಿರುವ iXiGO.com ®. ತರುಣ IITains ಹಾಗು INSEAD MBAs ಗಳ ತಂಡದಿಂದ ಜೂನ್ 2007 ರಲ್ಲಿ ಆರಂಭವಾಯಿತು. NASSCOM ಉತ್ಕೃಷ್ಟ–100 ವಿನೂತನ ಸಂಸ್ಥೆ ಎಂದು ಗುರುತಿಸಲ್ಪಟ್ಟಿದ್ದು, ಬ್ಯುಸಿನೆಸ್ ಟುಡೆ ಹಾಗು WSJ-Mint ಅವರು, ವಿಶಿಷ್ಟ ಮಾರುಕಟ್ಟೆ ನೀತಿ, ಉತ್ಪನ್ನ ಉಪಯುಕ್ತತೆ ಹಾಗು ಸಂವಹನಶೀಲ ನಿರ್ವಹಣೆ ತಂಡವೆಂದು ಹೆಸರುಪಡೆದಿದೆ. iXiGO ಕುರಿತು ಹೆಚ್ಚಿನ ಮಾಹಿತಿಗಾಗಿ www.ixigo.com ಗೆ ಭೇಟಿ ಕೊಡಿ.

**ಮಾಧ್ಯಮ ಸಂಪರ್ಕ**

ಶುದೀಪ್ ಮಜುಮ್ದಾರ್
ದಿ ಪ್ರಾಕ್ಟಿಸ್